**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 111/2023**

| | | | |
|---|---|---|---|
| **ಹೆಸರು** | : | **ಬೈಲಿಮ್** | ಚಾ.ಸಾ.1 |
| **ತಂದೆಯ ಹೆಸರು** | : | **ಮಹಿಮುದಮಿಯಾ** | ಪ್ರಾ.ಸಾ.1 |
| **ವಯಸ್ಸು** | : | **28 ವರ್ಷ** | ದಿನಾಂಕಃ 17-12-2025 |
| **ಉದ್ಯೋಗ** | : | **ಆಟೋ ಚಾಲಕ** | |
| **ವಾಸಸ್ಥಳ** | : | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-5 ಮತ್ತು 6ರವರು ನನಗೆ ಗೊತ್ತು. 1ನೇ ಆರೋಪಿ ನನಗೆ ಗೊತ್ತಿಲ್ಲ.

ಈಗ 6 ವರ್ಷಗಳ ಹಿಂದೆ ಮಧ್ಯಾಹ್ನ 12 ರಿಂದ 1 ಗಂಟೆ ಸುಮಾರಿಗೆ ಆಟೋದಲ್ಲಿ ಮೊಟ್ಟೆ ಮಾರಾಟ ಮಾಡಲು ಹಲ್ಚೇರ, ತೇಗಲತಿಪ್ಪಿ ಗ್ರಾಮಕ್ಕೆ ಹೋಗುತ್ತಿರುವಾಗ ಹಲ್ಚೇರ ದಾಟಿ ಮುಂದೆ ರಸ್ತೆಯಲ್ಲಿ ಹೋಗುತ್ತಿರುವಾಗ ಇಬ್ಬರು ವ್ಯಕ್ತಿಗಳು ಒಂದು ದ್ವಿಚಕ್ರ ವಾಹನದಲ್ಲಿ ಬಂದು ನನಗೆ ನಿಲ್ಲಿಸಿ ನನ್ನ ಮೇಲೆ ಹಲ್ಲೆ ಮಾಡಿ ನನ್ನ ಹತ್ತಿರ ಇದ್ದ ರೂ. 48,000/- ತೆಗೆದುಕೊಂಡು ಹೋಗಿರುತ್ತಾರೆ. ನಾನು ಅವರಿಗೆ ಹಿಂಬಾಲಿಸಿದರೂ ಸಹ ಅವರು ಅಲ್ಲಿಂದ ಓಡಿ ಹೋಗಿರುತ್ತಾರೆ.

ನಂತರ ಘಟನೆ ಬಗ್ಗೆ ನಮ್ಮ ಮಾಲೀಕರಿಗೆ ಹೇಳಿ ಅವರು ದೂರು ನೀಡಲು ಹೇಳಿದ ಕಾರಣ ದೂರನ್ನು ನೀಡಿದ್ದೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ವಿಡಿಯೋ ಕಾನ್ಪರೇನ್ಸ ಮೂಲಕ ಹಾಜರಿರುವ 1ನೇ ಆರೋಪಿಯನ್ನು ತೋರಿಸಿ ಕೇಳಿದಾಗ ಸದರಿ ವ್ಯಕ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆ ದಿನ ಬಂದ ವ್ಯಕ್ತಿಗಳು ತಮ್ಮ ಮುಖದ ಮೇಲೆ ಮಾಸ್ಕ ಧರಿಸಿದ ಕಾರಣ ಅವರ ಮುಖ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಗಳು ನನ್ನ ಮೊಬೈಲನ್ನು ಸಹ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮೊಬೈಲನ್ನು ನಾನು ನ್ಯಾಯಾಲಯದಿಂದ ಪಡೆದಿದ್ದೇನೆ.

ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಘಟನೆಯಾಗಿ 1-2 ದಿನಗಳ ನಂತರ ಘಟನಾ ಸ್ಥಳಕ್ಕೆ ಪೋಲಿಸರು ನನಗೆ ಕರೆದು ಘಟನಾ ಸ್ಥಳವನ್ನು ತೋರಿಸು ಎಂದು ಹೇಳಿ ನನ್ನ ಭಾವಚಿತ್ರವನ್ನು ಪಡೆದಿರುತ್ತಾರೆ. ಸದರಿ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನಂತರ ಪೋಲಿಸರು ನನಗೆ ಕಾಳಗಿಯಲ್ಲಿರುವ ದೇವಸ್ಥಾನದ

ಹತ್ತಿರ ಕರೆದುಕೊಂಡು ಹೋಗಿ ಅಲ್ಲಿದ್ದ ನನ್ನ ಬ್ಯಾಗಿನೊಂದಿಗೆ ನನ್ನ ಭಾವಚಿತ್ರವನ್ನು ಪಡೆದಿರುತ್ತಾರೆ. ಸದರಿ ಭಾವಚಿತ್ರ ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಆ ದಿನ ನಾನು ಸದರಿ ಬ್ಯಾಗಿಯಲ್ಲಿ ಹಣ ಇಟ್ಟಿದ್ದೆ ಮತ್ತು ಅದನ್ನು ಅಲ್ಲಿಗೆ ಬಂದ ವ್ಯಕ್ತಿಗಳು ನನ್ನಿಂದ ದೋಚಿಕೊಂಡು ಹೋಗಿದ್ದರು. ಸಾಕ್ಷಿಗೆ ಬ್ಯಾಗನ್ನು ತೋರಿಸಿ ಕೇಳಿದಾಗ ಅಷ್ಟೊಂದು ನೆನಪಿಲ್ಲ ಆದರೆ ಇದೇ ರೀತಿ ಕಪ್ಪು ಬಣ್ಣದಾಗಿತ್ತು ಎಂದು ನುಡಿಯುತ್ತಾರೆ. ನನಗೆ ಹಲ್ಲೆ ಮಾಡಿದ ವ್ಯಕ್ತಿಗಳು ನಿಪಿ-3ರ ಭಾವಚಿತ್ರದಲ್ಲಿ ಇಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಈ ದಿನ ನ್ಯಾಯಾಲಯ ಮುಂದೆ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರುವ 1ನೇ ಆರೋಪಿಯನ್ನು ಪೋಲಿಸರು ನನಗೆ ಕಾಳಗಿ ದೇವಸ್ಥಾನದ ಹತ್ತಿರ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಬಹಳ ದಿನಗಳಾದ ಕಾರಣ ನನಗೆ ನೆನಪಿಲ್ಲ ಎಂದು ಸೂಚಿಸಿದಾಗ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಆ ದಿನ ರೂ. 48,000/- ಕಳ್ಳತನವಾಗಿರುವುದಿಲ್ಲ ಮತ್ತು ರೂ. 10,025/- ಮಾತ್ರ ಕಳ್ಳತನವಾಗಿರುತ್ತದೆ ಎಂದರೆ ಸಾಕ್ಷಿ ರೂ. 48,000/- ಕಳ್ಳತನ ಮಾಡಿರುತ್ತಾರೆ ಮತ್ತು ರೂ. 10,025/- ಮಾತ್ರ ಸಿಕ್ಕಿರುತ್ತವೆ ಎಂದು ನುಡಿಯುತ್ತಾರೆ. ಪೋಲಿಸರು ನನಗೆ ಸದರಿ ಇಬ್ಬರು ವ್ಯಕ್ತಿಗಳನ್ನು ತೋರಿಸಿರುತ್ತಾರೆ ಮತ್ತು ನಾನು ಅವರನ್ನು ಗುರುತಿಸಿರುತ್ತೇನೆ ಎಂದರೆ ಸರಿ. ಅವರಲ್ಲಿ ನ್ಯಾಯಾಲಯದ ಮುಂದೆ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರಿರುವ 1ನೇ ಆರೋಪಿ ಇರುತ್ತಾನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳ ಹೆಸರು ಅಣ್ಣಪ್ಪ ಮತ್ತು ಮಾರುತಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೆ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ GAH ವಕೀಲರಿಂದಃ</u>**

ಸದರಿ ವ್ಯಕ್ತಿಗಳಿಗೆ ನಾನು ಪುನಃ ನೋಡಿರುವುದಿಲ್ಲ ಎಂದರೆ ಸರಿ. ಆ ದಿನ ಕಳ್ಳತನ ಮಾಡಿದ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಾಗಿರುವುದಿಲ್ಲ ಎಂದರೆ ಸರಿ. ನಿಪಿ-3ರ ಭಾವಚಿತ್ರದಲ್ಲಿ ಬೇರ ವ್ಯಕ್ತಿಗಳು ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**